# ಕರ್ನಾಟಕ ಲೇಖಕಿಯರ ಸಂಘ (ರಿ), ಬೆಂಗಳೂರು

ಫ್ಲಾಟ್ ನಂ.206, ವಿಜಯ ಮ್ಯಾನ್ಶನ್ಸ್, 2 ನೆಯ ಮಹಡಿ, ಕೆನರಾ ಬ್ಯಾಂಕ್ ಬಿಲ್ಡಿಂಗ್,

2 ನೆಯ ಅಡ್ಡರಸ್ತೆ, 2 ನೆಯ ಮುಖ್ಯ ರಸ್ತೆ, ಚಾಮರಾಜಪೇಟೆ, ಬೆಂಗಳೂರು–560 018

ಮೊಬೈಲ್ :

ಇ ಮೇಲ್ : lekhaki2012@gmail.com

ಫೇಸ್ ಬುಕ್ : Karnataka lekhakiyara sangha

ವೆಬ್‌ಸೈಟ್:

## ನಿಬಂಧನೆಗಳು

ಅಂಗರಚನೆ ದಿನಾಂಕ : 15 - 04 - 1979

ನಿಬಂಧನೆ ತಿದ್ದುಪಡಿ ದಿನಾಂಕ : ---------2026

## ಕರ್ನಾಟಕ ಲೇಖಕಿಯರ ಸಂಘ (ರಿ), ಬೆಂಗಳೂರು

1. **ಹೆಸರು**: ಈ ಸಂಸ್ಥೆಯ ಹೆಸರು "ಕರ್ನಾಟಕ ಲೇಖಕಿಯರ ಸಂಘ (ರಿ)". ("ಕಲೇಸಂ" ಎಂದು ಸಂಕ್ಷಿಪ್ತವಾಗಿ ಉಲ್ಲೇಖಿಸಲಾಗುವುದು)

2. **ವ್ಯಾಪ್ತಿ**: ಇದರ ಕಾರ್ಯವ್ಯಾಪ್ತಿ ಕರ್ನಾಟಕ ಮತ್ತು ಕನ್ನಡಿಗರು ಇರುವ ಎಲ್ಲ ಪ್ರದೇಶಗಳು.

3. **ಕಾರ್ಯಾಲಯ**: ಕಲೇಸಂ ಕಾರ್ಯಾಲಯ – ಫ್ಲಾಟ್ ನಂ.206, ವಿಜಯ ಮ್ಯಾನ್ಶನ್ಸ್, 2 ನೆಯ ಮಹಡಿ, ಕೆನರಾ ಬ್ಯಾಂಕ್ ಬಿಲ್ಡಿಂಗ್, 2 ನೆಯ ಅಡ್ಡರಸ್ತೆ, 2 ನೆಯ ಮುಖ್ಯ ರಸ್ತೆ, ಚಾಮರಾಜಪೇಟೆ, ಬೆಂಗಳೂರು 560 018.

4. **ಉದ್ದೇಶ**: ಕನ್ನಡ ಭಾಷೆ, ಸಾಹಿತ್ಯ, ಕಲೆ, ಮಹಿಳಾ ಸಂಸ್ಕೃತಿ ಮತ್ತು ಸ್ತ್ರೀ ಅಸ್ಮಿತೆಯ ಪೋಷಣೆ.

5. **ಕಾರ್ಯಸಾಧನೆ**: ಕಲೇಸಂ ಉದ್ದೇಶ ಸಾಧನೆಗೆ ಈ ಕೆಳಗೆ ಕಾಣಿಸಿರುವ ಕಾರ್ಯಗಳನ್ನು ಕೈಗೊಳ್ಳತಕ್ಕದ್ದು.

   ಅ) ಸಾಹಿತ್ಯ ರಚನೆಯಲ್ಲಿ ಮಹಿಳೆಯರಿಗೆ ಪ್ರೋತ್ಸಾಹ.

   ಆ) ಲೇಖಕಿಯರ ಸಮ್ಮೇಳನಗಳು, ಸಾಹಿತ್ಯೋತ್ಸವ, ನಾಡ ಹಬ್ಬ, ಉಪನ್ಯಾಸಗಳು, ಸ್ಪರ್ಧೆಗಳು, ವಿಚಾರ ಸಂಕಿರಣಗಳು, ಗೋಷ್ಠಿಗಳು, ಕಮ್ಮಟ ಹಾಗೂ ಕಾರ್ಯಾಗಾರಗಳನ್ನು ಆಯೋಜಿಸುವುದು.

   ಇ) ಲೇಖಕಿಯರ ವಿವಿಧ ವಿಷಯಗಳ ಉತ್ತಮ ಗ್ರಂಥಗಳನ್ನು ಇತರ ಭಾಷೆಗಳಿಂದ ಕನ್ನಡಕ್ಕೆ, ಕನ್ನಡ ಗ್ರಂಥಗಳನ್ನು ಇತರ ಭಾಷೆಗಳಿಗೆ ಭಾಷಾಂತರ ಮಾಡಿಸುವುದು, ಪ್ರಕಟಿಸುವುದು, ಪ್ರಚಾರ ಮತ್ತು ಮಾರಾಟ ಮಾಡುವುದು.

   ಈ) ಕಲೇಸಂ ಪ್ರಾಯೋಜಿತ ಕೃತಿಗಳ ಪ್ರಕಾಶನ ಮತ್ತು ಮಾರಾಟ

   ಉ) ಲೇಖಕಿಯರ ಕೃತಿಗಳ ಪ್ರದರ್ಶನ ಮತ್ತು ಮಾರಾಟ

   ಊ) ಸಂಘದ ಕಾರ್ಯಕಲಾಪಗಳ ಪ್ರಸಾರಕ್ಕೆ ನಿಯತಕಾಲಿಕ/ ಇ – ಪತ್ರಿಕೆ ಪ್ರಕಟಣೆ

ಋ) ಕಲೇಸಂನ ಕಾರ್ಯಚಟುವಟಿಕೆಗಳಲ್ಲಿ ಜಾತಿ, ಧರ್ಮ, ಪ್ರದೇಶ ಯಾವುದೇ ರೀತಿಯ ತಾರತಮ್ಯವಿಲ್ಲದೆ ಎಲ್ಲರನ್ನೂ ಒಳಗೊಳ್ಳುವುದು.

ಎ) ಕಲೇಸಂ ರಾಜಕೀಯ ವಾತಾವರಣದಿಂದ ಮುಕ್ತವಾಗಿರತಕ್ಕದ್ದು.

ಏ) ದತ್ತಿ ಉಪನ್ಯಾಸವೂ ಸೇರಿದಂತೆ ಕಲೇಸಂ ಉದ್ದೇಶಗಳಿಗೆ ನೆರವಾಗುವ ಪುದುವಟ್ಟು, ದೇಣಿಗೆ ಮತ್ತು ಕೊಡುಗೆಗಳ ಸ್ವೀಕಾರ.

ಐ) ಕನ್ನಡ ಭಾಷೆ, ಸಾಹಿತ್ಯ ಮತ್ತು ಮಹಿಳಾ ಸಂಸ್ಕೃತಿಯ ಬೆಳವಣಿಗೆಗಾಗಿ ಸರ್ಕಾರ ಮತ್ತು ಇತರ ಸಂಸ್ಥೆಗಳು ಕೈಗೊಳ್ಳುವ ಕಾರ್ಯಕ್ರಮಗಳಲ್ಲಿ ಸಹಭಾಗಿತ್ವ ವಹಿಸುವುದು.

ಒ) ಕಲೇಸಂನ ಕೇಂದ್ರ ಕಛೇರಿ ಮತ್ತು ಜಿಲ್ಲಾ ಘಟಕಗಳ ಕಛೇರಿಗಳಿಗೆ ಅಗತ್ಯವಾದ ಚರ ಮತ್ತು ಸ್ಥಿರಾಸ್ತಿಗಳನ್ನು ಸರ್ಕಾರಿ/ಅರೆ ಸರ್ಕಾರಿ/ಖಾಸಗಿ/ಸ್ಥಳೀಯ ಸಂಸ್ಥೆ/ದಾನಿಗಳು ಇತರೆ ಮೂಲಗಳಿಂದ ಗುತ್ತಿಗೆ/ ಕೊಡುಗೆಯಾಗಿ ಪಡೆಯಬಹುದು.

6. **ಸದಸ್ಯತ್ವ**: ಕಲೇಸಂನ ಉದ್ದೇಶಗಳನ್ನು ಅಂಗೀಕರಿಸಿ, ಅದರೊಡನೆ ಸಹಕರಿಸಲು ಬದ್ಧರಾಗುವ, 18 ವರ್ಷಕ್ಕೆ ಮೇಲ್ಪಟ್ಟ ಮಹಿಳೆಯರು ಈ ಕೆಳಗೆ ಕಾಣಿಸಿರುವಂತೆ ಯಾವ ವರ್ಗದ ಸದಸ್ಯತ್ವವನ್ನಾದರೂ ಪಡೆಯಬಹುದು. 18 ವರ್ಷಕ್ಕೆ ಮೇಲ್ಪಟ್ಟ ಮಹನೀಯರು ಈ ಕೆಳಗೆ ಕಾಣಿಸಿರುವಂತೆ ಮಹಾ ಪೋಷಕರು, ಪೋಷಕರು ಮಾತ್ರ ಆಗಬಹುದು, ಸದಸ್ಯರಾಗುವುದಿಲ್ಲ.

**ಸದಸ್ಯತ್ವದ ವರ್ಗ**:

| | |
|---|---|
| ೧) ಮಹಾ ಪೋಷಕರು | ರೂ. 50,000. |
| ೨) ಪೋಷಕರು | ರೂ. 25,000. |
| ೩) ಆಜೀವ ಸದಸ್ಯರು | ರೂ. 1000. |

7. **ಸದಸ್ಯತ್ವದ ವಿವರಗಳು**:

೧) ಸದಸ್ಯೆಯರಾಗಬಯಸುವವರನ್ನು ಆಯಾ ವರ್ಗದ ಸದಸ್ಯರನ್ನಾಗಿ ಸೇರಿಸಿಕೊಳ್ಳಲು ಅಧ್ಯಕ್ಷರಿಗೆ ಅಧಿಕಾರವಿರತಕ್ಕದ್ದು ಮತ್ತು ಅದಕ್ಕೆ ಮುಂದಿನ ಕಾರ್ಯಕಾರಿ ಸಮಿತಿಯ ಒಪ್ಪಿಗೆ ಪಡೆಯತಕ್ಕದ್ದು. ಯಾವ ಕಾರಣದಿಂದಲಾದರೂ ಅರ್ಜಿಯನ್ನು ಒಪ್ಪಿಕೊಳ್ಳದಿದ್ದರೆ ಪಾವತಿ ಮಾಡಿದ ಸದಸ್ಯತ್ವದ ಮೊಬಲಗನ್ನು ಸಂಬಂಧಿಸಿದವರಿಗೆ ಹಿಂದಿರುಗಿಸತಕ್ಕದ್ದು.

೨) ಸದಸ್ಯೆಯರಾಗಬಯಸುವವರು ಸದಸ್ಯತ್ವಕ್ಕಾಗಿ ಕೊಡತಕ್ಕ ಚಂದಾ ಹಣದೊಡನೆ ತಮ್ಮ ಅರ್ಜಿಯನ್ನು ಸಲ್ಲಿಸತಕ್ಕದ್ದು.

೩) ಸದಸ್ಯೆಯರಾಗಬಯಸುವವರು ಮೊಬೈಲ್ /ಅಂಚೆ/ಕೊರಿಯರ್/ಕಲೇಸಂ ವೆಬ್‌ಸೈಟ್ ಮೂಲಕ ಅರ್ಜಿ ಭರ್ತಿ ಮಾಡಿ ಸ್ವಯಂ ದೃಢೀಕೃತ ಆಧಾರ್/ಪಾಸ್ ಪೋರ್ಟ್ ಇತ್ಯಾದಿ ಅಧಿಕೃತ ದಾಖಲೆ ಒದಗಿಸಿ, ಆನ್ ಲೈನ್ ಬ್ಯಾಂಕಿಂಗ್ ಮೂಲಕ ಸದಸ್ಯತ್ವ ಶುಲ್ಕ ಪಾವತಿಸತಕ್ಕದ್ದು.

೪) ಕನ್ನಡದಲ್ಲಿ ಕನಿಷ್ಠ ಒಂದು ಕವಿತೆ/ಲೇಖನ/ಕಥೆ/ಪ್ರಬಂಧ/ ಕಾದಂಬರಿ/ ಸಾಹಿತ್ಯದ ಯಾವುದೇ ಪ್ರಕಾರದ ಲೇಖನಗಳನ್ನು ಬರೆದು ಪತ್ರಿಕೆಗಳಲ್ಲಿ / ಪುಸ್ತಕ ರೂಪದಲ್ಲಿ/ಡಿಜಿಟಲ್ ಪತ್ರಿಕೆಗಳಲ್ಲಿ ಪ್ರಕಟಿಸಿರುವ ಲೇಖಕಿಯರು ಮಾತ್ರ ಸದಸ್ಯತ್ವ ಪಡೆಯಲು ಅರ್ಹರಾಗಿರುತ್ತಾರೆ.

೫) ಆಯಾ ವರ್ಗಗಳಿಂದ ಸ್ವೀಕೃತವಾಗುವ ಸದಸ್ಯತ್ವ ಶುಲ್ಕವನ್ನು ಸ್ಥಾಯಿನಿಧಿಗೆ ವರ್ಗಾಯಿಸತಕ್ಕದ್ದು ಮತ್ತು ಅದರಿಂದ ಬರುವ ಬಡ್ಡಿ ಹಣವನ್ನು ಕಲೇಸಂನ ಕಾರ್ಯಚಟುವಟಿಕೆಗಳಿಗೆ ಬಳಸತಕ್ಕದ್ದು.

8. **ಸದಸ್ಯತ್ವದ ಹಕ್ಕು ಬಾಧ್ಯತೆಗಳು**:

೧) ಸದಸ್ಯೆಯರಿಗೆ ವರ್ಷಕ್ಕೊಮ್ಮೆ ನಡೆಯುವ ಕಲೇಸಂನ ವಾರ್ಷಿಕ ಮಹಾಸಭೆ/ ವಿಶೇಷ ಸಭೆಗಳಲ್ಲಿ ಭಾಗವಹಿಸುವ, ಮತ ಚಲಾಯಿಸುವ ಮತ್ತು ನಿಯಮಗಳನುಸಾರ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುವ ಅಧಿಕಾರ ಇರತಕ್ಕದ್ದು.

೨) ಕಲೇಸಂನ ನಿಯತಕಾಲಿಕೆ/ಇ ಪತ್ರಿಕೆಗಳನ್ನು ಉಚಿತವಾಗಿ ಪಡೆಯಬಹುದು.

೩) ಕಲೇಸಂ ನೀಡುವ ಗುರುತಿನ ಚೀಟಿಯನ್ನು ಸದಸ್ಯರು ವಾರ್ಷಿಕ ಮಹಾಸಭೆ/ ವಿಶೇಷ ಸಭೆಗಳಲ್ಲಿ ಭಾಗವಹಿಸಲು ಕಡ್ಡಾಯವಾಗಿ ತರತಕ್ಕದ್ದು.

೪) ಸದಸ್ಯೆಯರು ಮೂರು ವರ್ಷದ ಅವಧಿಯಲ್ಲಿ ಕನಿಷ್ಠ ಒಂದು ವಾರ್ಷಿಕ ಮಹಾಸಭೆಯಲ್ಲಾದರೂ ಆನ್ ಲೈನ್/ಮುಖತಃ ಭಾಗವಹಿಸತಕ್ಕದ್ದು. ತಪ್ಪಿದಲ್ಲಿ ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅವರು ಅನರ್ಹರಾಗುತ್ತಾರೆ.

೫) ತಮ್ಮ ಬದಲಾದ ವಿಳಾಸ, ಮೇಲ್ ಐಡಿ, ಫೋನ್ ನಂಬರ್ ಇತ್ಯಾದಿ ವಿವರಗಳನ್ನು ಸದಸ್ಯೆಯರು ಕಲೇಸಂ ಕಛೇರಿಗೆ ಸಲ್ಲಿಸತಕ್ಕದ್ದು. ಇಲ್ಲದಿದ್ದಲ್ಲಿ ಅವರಿಗೆ ಕಲೇಸಂನ ಪ್ರಕಟಣೆಗಳು/ಸೂಚನೆಗಳು/ಪತ್ರಗಳು ತಲುಪದಿದ್ದಲ್ಲಿ ಅದಕ್ಕೆ ಕಲೇಸಂ ಜವಾಬ್ದಾರಿಯಾಗಿರುವುದಿಲ್ಲ.

೬) ಕಲೇಸಂನ ಸದಸ್ಯತ್ವದ ಅಭಿಯಾನವನ್ನು ಜಿಲ್ಲಾ ಘಟಕಗಳ ಮಟ್ಟದಲ್ಲಿ ಆಯೋಜಿಸುವ ಕುರಿತು ಸೂಚನೆ ಹೊರಡಿಸುವ ಅಧಿಕಾರವನ್ನು ಅಧ್ಯಕ್ಷರು ಹೊಂದಿರುತ್ತಾರೆ. ಇಂತಹ ಸೂಚನೆಗಳನ್ನು ಕಾರ್ಯಕಾರಿ ಸಮಿತಿ ಸಭೆಯಲ್ಲಿ ದಾಖಲಿಸತಕ್ಕದ್ದು.

9. **ಕಾರ್ಯಕಾರಿ ಸಮಿತಿ**: ಕಲೇಸಂ ಆಡಳಿತವನ್ನು ನಡೆಸಲು ಈ ಕೆಳಕಂಡಂತೆ ಕಾರ್ಯಕಾರಿ ಸಮಿತಿ ಇರತಕ್ಕದ್ದು.

೧) ಅಧ್ಯಕ್ಷರು ..................1

೨) ಉಪಾಧ್ಯಕ್ಷರು ............. 2

೩) ಕಾರ್ಯದರ್ಶಿ ............1

೪) ಸಹ ಕಾರ್ಯದರ್ಶಿ ......1

೫) ಕೋಶಾಧಿಕಾರಿ ........... 1

೬) ಸಮಿತಿ ಸದಸ್ಯರು, ಬೆಂಗಳೂರು ನಗರ ..... 10

೭) ಜಿಲ್ಲಾ ಘಟಕ ಇರುವೆಡೆ ಅದರ ಅಧ್ಯಕ್ಷರು.

೮) ಜಿಲ್ಲಾ ಘಟಕ ಇಲ್ಲದೆಡೆ ನಾಮನಿರ್ದೇಶಿತ ಸದಸ್ಯರು........1

ಈ ಕಾರ್ಯಕಾರಿ ಸಮಿತಿಯು ಕೇಂದ್ರ ಸಮಿತಿಯಾಗಿ ಕಾರ್ಯ ನಿರ್ವಹಿಸುತ್ತದೆ. ಕ್ರಮ ಸಂಖ್ಯೆ ೨ ರಿಂದ ೮ ರವರೆಗಿನ ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಸಮಿತಿ ಸದಸ್ಯರನ್ನು ಆಯ್ಕೆ ಮಾಡುವ ಅಧಿಕಾರ ಅಧ್ಯಕ್ಷರಿಗೆ ಇರತಕ್ಕದ್ದು.

10. **ಜಿಲ್ಲಾ ಘಟಕಗಳು**:

೧) ಕನಿಷ್ಠ 50 ಸದಸ್ಯೆಯರನ್ನು ಹೊಂದಿರುವ ಜಿಲ್ಲೆಗಳಲ್ಲಿ ಜಿಲ್ಲಾ ಘಟಕಗಳನ್ನು ಕೇಂದ್ರ ಸಮಿತಿಯು ರಚಿಸತಕ್ಕದ್ದು. ಈ ಸದಸ್ಯೆಯರು ಕಲೇಸಂನ ನೇರ ಸದಸ್ಯೆಯರಾಗಿರತಕ್ಕದ್ದು.

೨) ಎಲ್ಲಾ ಜಿಲ್ಲಾ ಘಟಕಗಳು ಕೇಂದ್ರ ಸಮಿತಿಯ ನಿಯಂತ್ರಣಕ್ಕೆ ಒಳಪಟ್ಟಿರತಕ್ಕದ್ದು.

೩) ಜಿಲ್ಲಾ ಘಟಕಗಳು ಪ್ರತಿ ವರ್ಷ ಕೇಂದ್ರ ಸಮಿತಿಗೆ ವಾರ್ಷಿಕ ವರದಿ ಮತ್ತು ಲೆಕ್ಕ ಪರಿಶೋಧಕರಿಂದ ಪರಿಶೀಲಿಸಲ್ಪಟ್ಟ ಲೆಕ್ಕಪತ್ರವನ್ನು ಆಯಾ ವರ್ಷದ ಜೂನ್ ತಿಂಗಳ ಅಂತ್ಯದ ಒಳಗೆ ಕಳುಹಿಸತಕ್ಕದ್ದು.

೪) ಜಿಲ್ಲಾ ಘಟಕಗಳಿಗೆ ತಮ್ಮದೇ ಆದ ಬ್ಯಾಂಕ್ ಖಾತೆ ಹೊಂದಲು ಕೇಂದ್ರ ಸಮಿತಿಯು ಅವಕಾಶ ಕಲ್ಪಿಸುವುದು.

೫) ಪ್ರತಿ ಜಿಲ್ಲಾ ಘಟಕದ ಸಮಿತಿಯಲ್ಲಿ, ಕೇಂದ್ರ ಕಾರ್ಯಕಾರಿ ಸಮಿತಿಯ ಕನಿಷ್ಠ ಒಬ್ಬರು ಸದಸ್ಯರು ನಾಮನಿರ್ದೇಶಿತ ಸದಸ್ಯರಾಗಿರತಕ್ಕದ್ದು.

೬) ಜಿಲ್ಲಾ ಘಟಕದ ಅಧ್ಯಕ್ಷರ ಚುನಾವಣಾ ಪ್ರಕ್ರಿಯೆಯಲ್ಲಿ ಕೇಂದ್ರ ಸಮಿತಿಯ ಕಾರ್ಯಕಾರಿ ಸದಸ್ಯರೊಬ್ಬರ ಉಸ್ತುವಾರಿ ಇರತಕ್ಕದ್ದು.

೭) ಕಲೇಸಂ ಸದಸ್ಯತ್ವ ಶುಲ್ಕದ ಶೇ.50 ಮೊತ್ತವನ್ನು ಜಿಲ್ಲಾ ಘಟಕಗಳಿಗೆ ಕೊಡತಕ್ಕದ್ದು.

೮) ಜಿಲ್ಲಾ ಮಟ್ಟದ/ಪ್ರಾದೇಶಿಕ ಮಟ್ಟದ ಸಾಹಿತ್ಯ ಸಮ್ಮೇಳನ ಆಯೋಜಿಸಲು ಅವಕಾಶವಿದ್ದು, ಕೇಂದ್ರ ಸಮಿತಿಯ ಅಧ್ಯಕ್ಷರ ಉಸ್ತುವಾರಿಯಲ್ಲಿ ಅಂತಹ ಸಮ್ಮೇಳನ ನಡೆಯತಕ್ಕದ್ದು.

೯) ಕೇಂದ್ರ ಸಮಿತಿಗೆ ಅನ್ವಯಿಸುವ ಎಲ್ಲ ನಿಯಮಗಳು ಜಿಲ್ಲಾ ಘಟಕಗಳಿಗೂ ಸಹ ಅನ್ವಯಿಸತಕ್ಕದ್ದು.

11. **ಅಧ್ಯಕ್ಷರ ಚುನಾವಣೆ**:

೧) ಅಧ್ಯಕ್ಷರ ಅಧಿಕಾರಾವಧಿ ಮೂರು ವರ್ಷಗಳು

೨) ಸಂಘದ ಅಧ್ಯಕ್ಷ ಸ್ಥಾನಕ್ಕೆ ಮೂರು ವರ್ಷಗಳಿಗೊಮ್ಮೆ ಚುನಾವಣೆ ನಡೆಯತಕ್ಕದ್ದು.

೩) ಅಧ್ಯಕ್ಷರ ಸ್ಥಾನಕ್ಕೆ ಸ್ಪರ್ಧಿಸುವರು ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಗಳಲ್ಲಿ ಸೇವೆ ಸಲ್ಲಿಸಿದವರಾಗಿರಬೇಕು, ಕನಿಷ್ಠ 5 ವರ್ಷ ಸತತವಾಗಿ ಸಂಘದ ಸದಸ್ಯರಾಗಿರಬೇಕು.

೪) ಸತತವಾಗಿ ಎರಡು ಅವಧಿಗಿಂತ ಹೆಚ್ಚಾಗಿ ಒಬ್ಬರೇ ಅಧ್ಯಕ್ಷರಾಗುವಂತಿಲ್ಲ. ಆದರೆ ಒಂದು ಅವಧಿ ಬಿಟ್ಟು ಅನಂತರ ಹಿಂದಿನ ಅಧ್ಯಕ್ಷರಿಗೆ ಮತ್ತೆ ಸ್ಪರ್ಧಿಸಲು ಅವಕಾಶ ಇರುತ್ತದೆ.

೫) ಅಧ್ಯಕ್ಷರ ಅವಧಿ ಮುಗಿಯುವುದರೊಳಗಾಗಿ ಮುಂದಿನ ಅಧ್ಯಕ್ಷರ ಚುನಾವಣಾ ಪ್ರಕ್ರಿಯೆ ಮುಗಿಯತಕ್ಕದ್ದು.

೬) ಅಧ್ಯಕ್ಷರು ತಮ್ಮ ಅಧಿಕಾರದ ಅವಧಿಯಲ್ಲಿ ಬೆಂಗಳೂರಿನಲ್ಲಿಯೇ ವಾಸಿಸತಕ್ಕದ್ದು.

೭) ಅಧ್ಯಕ್ಷರ ಚುನಾವಣೆಯಲ್ಲಿ ಮತ ಚಲಾಯಿಸಲು, ಆ ವರ್ಷದ ಏಪ್ರಿಲ್ ಒಂದನೇ ತಾರೀಖಿಗೆ ಒಂದು ವರ್ಷದ ಸದಸ್ಯತ್ವದ ಅವಧಿ ಪೂರೈಸಿರುವಂತಹ ಸದಸ್ಯೆಯರು ಮಾತ್ರ ಅರ್ಹರಾಗಿರುತ್ತಾರೆ.

೮) ಅಧ್ಯಕ್ಷರ ಚುನಾವಣೆಗೆ ಮೂರು ತಿಂಗಳು ಮುಂಚಿತವಾಗಿಯೇ ಮತದಾರರ ಪಟ್ಟಿ ಸಿದ್ಧಪಡಿಸಿ, ಸಂಘದ ಕಛೇರಿಯಲ್ಲಿ/ವೆಬ್ ಸೈಟ್ ನಲ್ಲಿ ಪ್ರಕಟಿಸತಕ್ಕದ್ದು, ಲೋಪದೋಷಗಳನ್ನು ಸರಿಪಡಿಸುವುದು, ಸೇರ್ಪಡೆ ಮುಂತಾದ ಬದಲಾವಣೆಗಳಾಗಬೇಕಿದ್ದರೆ ಸಂಬಂಧಪಟ್ಟ ಸದಸ್ಯರು 15 ದಿನಗಳ ಒಳಗೆ ಕಾರ್ಯದರ್ಶಿ ಅಥವಾ ಅಧ್ಯಕ್ಷರಿಗೆ ಪತ್ರದ ಮೂಲಕ/ಇ ಮೇಲ್/ ವಾಟ್ಸಪ್ ಮೂಲಕ ತಿಳಿಸತಕ್ಕದ್ದು.

೯) ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುವ ಅಭ್ಯರ್ಥಿಯ ಹೆಸರನ್ನು ಓರ್ವ ಅರ್ಹ ಸದಸ್ಯರು ಸೂಚಿಸಿ ಇನ್ನೋರ್ವ ಅರ್ಹ ಸದಸ್ಯರು ಅನುಮೋದಿಸತಕ್ಕದ್ದು.

೧೦) **ಚುನಾವಣಾ ಪ್ರಕ್ರಿಯೆ** :

ಅ) ಚುನಾವಣಾಧಿಕಾರಿಯನ್ನು ಕಾರ್ಯಕಾರಿ ಸಮಿತಿ ಆಯ್ಕೆ ಮಾಡತಕ್ಕದ್ದು.

ಆ) ಚುನಾವಣಾ ದಿನಾಂಕದಂದು ನಿಗದಿತ ಸಮಯದಲ್ಲಿ ಸದಸ್ಯರು ಮತ ಚಲಾಯಿಸತಕ್ಕದ್ದು. ಚುನಾವಣಾ ಪ್ರಕ್ರಿಯೆ ಇ – ಮತದಾನದ ಮೂಲಕ ನಡೆಯತಕ್ಕದ್ದು.

೧೧) **ಚುನಾವಣೆಯಲ್ಲಿ ಅನುಸರಿಸಬೇಕಾದ ವಿಧಾನಗಳು** :

ಅ) ಚುನಾವಣೆ ಪ್ರಕಟಣೆ

ಆ) ನಾಮಪತ್ರ ಸಲ್ಲಿಸಲು ಕೊನೆಯ ದಿನಾಂಕ...... ಅ

ಇ) ಪರಿಶೀಲನೆ ದಿನಾಂಕ....... ಅ+೧

ಈ) ನಾಮಪತ್ರ ಹಿಂತೆಗೆದುಕೊಳ್ಳಲು ಕೊನೆಯ ದಿನ...... ಅ+4

ಉ) ಅಂತಿಮ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ.... .. ಅ+5

ಊ) ಚುನಾವಣಾ ದಿನಾಂಕ..... ... ಅ+20

೧೨) ಕಾರಣಾಂತರಗಳಿಂದ ಅವಧಿಗೆ ಮುನ್ನ ಅಧ್ಯಕ್ಷರ ಸ್ಥಾನ ಖಾಲಿಯಾದರೆ ಮುಂದಿನ ಅಧ್ಯಕ್ಷರ ಚುನಾವಣೆಯಾಗುವವರೆಗೆ ಕಾರ್ಯಕಾರಿ ಸಮಿತಿಯು, ಇಬ್ಬರು ಉಪಾಧ್ಯಕ್ಷರಲ್ಲಿ ಒಬ್ಬರನ್ನು ಅಧ್ಯಕ್ಷರನ್ನಾಗಿ ನೇಮಿಸತಕ್ಕದ್ದು. ಕಲೇಸಂನ ದಿನನಿತ್ಯದ ಹಾಗೂ ವಿಶೇಷ ಸಂದರ್ಭದ ಎಲ್ಲ ಕಾರ್ಯಗಳ ಹೊಣೆಗಾರಿಕೆಯನ್ನು ಅಧ್ಯಕ್ಷರೇ ನಿರ್ವಹಿಸತಕ್ಕದ್ದು.

೧೩) ಅಧ್ಯಕ್ಷರ ಗೈರು ಹಾಜರಿಯಲ್ಲಿ ಉಪಾಧ್ಯಕ್ಷರು ಕೆಲಸ ಕಾರ್ಯಗಳನ್ನು ನಿರ್ವಹಿಸತಕ್ಕದ್ದು.

೧೪) ಕಾರ್ಯದರ್ಶಿ/ ಸಹ ಕಾರ್ಯದರ್ಶಿ ಅಧ್ಯಕ್ಷರ ಸೂಚನೆ ಮೇರೆಗೆ ಕಲೇಸಂಗೆ ಸಂಬಂಧಪಟ್ಟ ಕಾಗದಪತ್ರಗಳ ವ್ಯವಹಾರ, ಕಾರ್ಯಕ್ರಮಗಳ ಏರ್ಪಾಡು, ಸಮಿತಿ ಸಭೆಗಳನ್ನು ಕರೆಯುವುದು, ಸಭೆಯ ನಡವಳಿಗಳನ್ನು ದಾಖಲಿಸುವುದು ಮತ್ತು ಇತರ ಕೆಲಸಗಳನ್ನು ನಿರ್ವಹಿಸತಕ್ಕದ್ದು.

೧೫) ಕೋಶಾಧಿಕಾರಿಗಳು ಕಲೇಸಂನ ಹಣಕಾಸಿನ ಲೆಕ್ಕಗಳನ್ನು ಇಡುವುದು, ಬ್ಯಾಂಕಿನ ಮತ್ತು ಸಂಘದ ಇತರೆ ಹಣಕಾಸಿನ ವ್ಯವಹಾರವನ್ನು ನಿರ್ವಹಿಸತಕ್ಕದ್ದು.

12. **ಕಾರ್ಯಕಾರಿ ಸಮಿತಿ**:

ಅ) ನಾಮಕರಣ ಮಾಡಿದ ಯಾವುದೇ ಪದಾಧಿಕಾರಿ/ ಕಾರ್ಯಕಾರಿ ಸಮಿತಿ ಸದಸ್ಯರನ್ನು ಬದಲಾಯಿಸುವ ಅಧಿಕಾರ ಅಧ್ಯಕ್ಷರಿಗಿರತಕ್ಕದ್ದು.

ಆ) ಕಲೇಸಂಗೆ ಸಂಬಂಧಪಟ್ಟ ಮುಖ್ಯವಾದ ಎಲ್ಲ ವಿಷಯಗಳು ಕಾರ್ಯಕಾರಿ ಸಮಿತಿ ಮುಂದೆ ಬಂದು ನಿರ್ಣಯವಾಗಬೇಕು. ಕಾರ್ಯಕಾರಿ ಸಮಿತಿಯ ಬಹುಮತದ ತೀರ್ಮಾನದಂತೆ ಅಧ್ಯಕ್ಷರು ಕಾರ್ಯ ನಿರ್ವಹಿಸತಕ್ಕದ್ದು. ಕಾರ್ಯಕಾರಿ ಸಮಿತಿ ಸಭೆ ಆನ್ ಲೈನ್/ಮುಖತಃ ಕನಿಷ್ಠ ಮೂರು ತಿಂಗಳಿಗೊಮ್ಮೆ, ವರ್ಷದಲ್ಲಿ ನಾಲ್ಕು ಸಲವಾದರೂ ಸೇರಬೇಕು. ಅಗತ್ಯ ಸಂದರ್ಭಗಳಲ್ಲಿ ಅಧ್ಯಕ್ಷರು ವಿಶೇಷ ಸಭೆ ಕರೆಯಬಹುದು.

ಇ) ಕಾರ್ಯಕಾರಿ ಸಮಿತಿ ಸಭೆಯಲ್ಲಿ ಯೋಜನೆಯಂತೆ ಆಗಿರುವ ಮತ್ತು ಆಗಬೇಕಾಗಿರುವ ಕಾರ್ಯಗಳ ವಿಮರ್ಶೆ, ಜಮಾ-ಖರ್ಚು ಲೆಕ್ಕ ಪರಿಶೀಲನೆ ಇವು ಚರ್ಚೆಯಾಗಿ ನಿರ್ಣಯವಾಗಬೇಕು. ಕಾರ್ಯಕಾರಿ ಸಮಿತಿ ಸದಸ್ಯರಲ್ಲಿ ನಾಲ್ಕನೇ ಒಂದು ಭಾಗದಷ್ಟು ಸಂಖ್ಯೆಯ ಸದಸ್ಯರು ಸಭೆಯಲ್ಲಿ ಹಾಜರಿರಬೇಕು. ಸಭೆಯ ತಿಳುವಳಿಕೆ ಪತ್ರವನ್ನು 7 ದಿನಗಳ ಮುಂಚೆ ಅಥವಾ ತುರ್ತು ಸಂದರ್ಭದಲ್ಲಿ ಒಂದು ದಿನ ಮುಂಚೆ ಸೂಕ್ತ ರೀತಿಯಲ್ಲಿ ನೋಟೀಸು ನೀಡಿ ಸಭೆ ಕರೆಯತಕ್ಕದ್ದು.

ಈ) ಪದಾಧಿಕಾರಿ/ಕಾರ್ಯಕಾರಿ ಸಮಿತಿ ಸದಸ್ಯರು ಅಧ್ಯಕ್ಷರ ಪೂರ್ವಾನುಮತಿ ಇಲ್ಲದೆ ಸತತವಾಗಿ ಮೂರು ಸಭೆಗೆ ಗೈರು ಹಾಜರಾದರೆ ಅಂಥವರನ್ನು ಆಯಾ ಸಮಿತಿಯಿಂದ ತೆಗೆದು ಹಾಕುವ ಅಧಿಕಾರ ಅಧ್ಯಕ್ಷರಿಗೆ ಇರತಕ್ಕದ್ದು.

ಉ) ಕಛೇರಿ ಕೆಲಸಕ್ಕಾಗಿ ಸಿಬ್ಬಂದಿ/ಸಹಾಯಕರನ್ನು ನೇಮಿಸಿಕೊಳ್ಳುವ ಮತ್ತು ವಜಾ ಮಾಡುವ ಅಧಿಕಾರ ಅಧ್ಯಕ್ಷರಿಗೆ ಇರತಕ್ಕದ್ದು.

13. **ಸಲಹಾ ಸಮಿತಿ ರಚನೆ**: ಕಲೇಸಂನ ಧ್ಯೇಯೋದ್ದೇಶಗಳ ಸಾಧನೆಗಾಗಿ ಸಲಹಾ ಸಮಿತಿಯನ್ನು ಅಧ್ಯಕ್ಷರು ರಚಿಸತಕ್ಕದ್ದು. ಈ ಸಮಿತಿಗೆ ಕಲೇಸಂ ಅಧ್ಯಕ್ಷರೇ ಅಧ್ಯಕ್ಷರಾಗಿರತಕ್ಕದ್ದು. ಸಲಹಾ ಸಮಿತಿ ಸಭೆಯನ್ನು ಕನಿಷ್ಠ ವರ್ಷಕ್ಕೆ ಎರಡು ಬಾರಿ ಯಾದರೂ (ಆನ್ ಲೈನ್/ ಮುಖತಃ) ನಡೆಸತಕ್ಕದ್ದು.

14. **ಸರ್ವಸದಸ್ಯರ ಸಭೆ**:

೧) ವರ್ಷಕ್ಕೊಮ್ಮೆ ಸರ್ವಸದಸ್ಯರ ಸಭೆ ಸೇರಿ ಆಯಾ ವರ್ಷದ ಆಡಳಿತ ವರದಿ, ಆಡಿಟ್ ಆದ ಲೆಕ್ಕಪತ್ರಗಳನ್ನು ಪರಿಶೀಲಿಸಬೇಕು. ಹಾಗೆಯೇ ಮುಂದಿನ ವರ್ಷದ ಅಂದಾಜು ಬಜೆಟ್ಟನ್ನು ಅಂಗೀಕರಿಸಬೇಕು. ಮೂರು ವರ್ಷಕ್ಕೊಮ್ಮೆ ಸರ್ವ ಸದಸ್ಯರ ಸಭೆಯಲ್ಲಿ ನೂತನ ಅಧ್ಯಕ್ಷರನ್ನು ಚುನಾಯಿಸಬೇಕು. ಸರ್ವಸದಸ್ಯರ ಸಭೆಯಲ್ಲಿ ಒಟ್ಟು ಸದಸ್ಯರ ಮೂರನೆಯ ಒಂದು ಭಾಗದಷ್ಟು ಸದಸ್ಯರಾದರೂ ಹಾಜರಿರಬೇಕು. ಸರ್ವ ಸದಸ್ಯರ ಸಭೆಯ ಮಾಹಿತಿಯನ್ನು 21 ದಿನಗಳಿಗೆ ಮುಂಚೆ ಸದಸ್ಯರಿಗೆ ತಲುಪುವಂತೆ ವಾಟ್ಸಪ್/ ವೆಬ್‌ಸೈಟ್/ಆನ್ ಲೈನ್ ಮೂಲಕ ಕಳುಹಿಸಬೇಕು. ನಿಗದಿತ ಸಮಯದಲ್ಲಿ ಕೋರಂ ಇಲ್ಲದಿದ್ದರೆ ಸಭೆಯನ್ನು ಅರ್ಧಘಂಟೆ ಮುಂದಕ್ಕೆ ಹಾಕಿ ನಂತರ ನಡೆಸಬೇಕು. ಇಂತಹ ಮುಂದೂಡಿದ ಸಭೆಗೆ ಕೋರಂ ಅಗತ್ಯವಿರುವುದಿಲ್ಲ.

೨) ಸದಸ್ಯರಿಗೆ ಯಾವುದಾದರೂ ಪ್ರಶ್ನೆ/ಸಲಹೆ/ಸೂಚನೆ ಇದ್ದರೆ ಅದನ್ನು ಬರಹ ರೂಪದಲ್ಲಿ ಅಧ್ಯಕ್ಷರು/ ಕಾರ್ಯದರ್ಶಿಯವರಿಗೆ 10 ದಿನ ಮುಂಚಿತವಾಗಿ ಕಳಿಸತಕ್ಕದ್ದು.

15. **ಲೇಖಕಿಯರ ಸಮ್ಮೇಳನ**: ಕಾಲಕಾಲಕ್ಕೆ ಲೇಖಕಿಯರ ಸಮ್ಮೇಳನ ನಡೆಸತಕ್ಕದ್ದು. ಬೆಂಗಳೂರು ನಗರದಲ್ಲಾದರೆ ಸಂಘವೇ ಸ್ವಾಗತ ಸಮಿತಿಯನ್ನು ರಚಿಸಬೇಕು. ಜಿಲ್ಲೆಗಳಲ್ಲಿ ಆದರೆ ಕಲೇಸಂ ಕೇಂದ್ರ ಸಮಿತಿಯ ಮಾರ್ಗದರ್ಶನದಲ್ಲಿ ಜಿಲ್ಲಾ ಸಮಿತಿಯು ಸ್ವಾಗತ ಸಮಿತಿಯನ್ನು ರಚಿಸಿ ಸಮ್ಮೇಳನವನ್ನು ನಡೆಸತಕ್ಕದ್ದು. ಸಮ್ಮೇಳನಕ್ಕೆ ಪ್ರತಿನಿಧಿ ಶುಲ್ಕವನ್ನು ಕಲೇಸಂ ಸಲಹಾ

ಸಮಿತಿ ಮತ್ತು ಕಾರ್ಯಕಾರಿ ಸಮಿತಿ ನಿರ್ಧರಿಸತಕ್ಕದ್ದು. ಕಲೇಸಂ ಕಾರ್ಯಕಾರಿ ಸಮಿತಿ/ಸಲಹಾ ಸಮಿತಿಯು ಸಮ್ಮೇಳನಾಧ್ಯಕ್ಷರನ್ನು ಆಯ್ಕೆ ಮಾಡತಕ್ಕದ್ದು. ಕಲೇಸಂ ಅಧ್ಯಕ್ಷರು ಸಮ್ಮೇಳನಕ್ಕೆ ಮೊದಲು ವಿಷಯ ನಿಯಾಮಕ ಸಮಿತಿಯನ್ನು ರಚಿಸಿ ಸಮ್ಮೇಳನದಲ್ಲಿ ಚರ್ಚಿಸುವ ವಿಷಯಗಳನ್ನು ಗೊತ್ತುಮಾಡಬೇಕು. ಖಾಸಗಿ ನಿರ್ಣಯಗಳಿಗೂ ಅವಕಾಶವಿರತಕ್ಕದ್ದು.

16. **ಹಣಕಾಸಿನ ಆಡಳಿತ**: ಸರ್ಕಾರ ಮತ್ತು ಇತರ ಮೂಲಗಳಿಂದ ಸಂಘಕ್ಕೆ ಬರುವ ಹಣವನ್ನು ಬ್ಯಾಂಕಿನಲ್ಲಿ ಸಂಘದ ಹೆಸರಿನಲ್ಲಿ ಖಾತೆ ತೆಗೆದು ಜಮಾ ಮಾಡಬೇಕು. ಅಧ್ಯಕ್ಷರೊಂದಿಗೆ ಕಾರ್ಯದರ್ಶಿ ಅಥವಾ ಕೋಶಾಧಿಕಾರಿಗಳು ಸಹಿ ಮಾಡಿ ಬ್ಯಾಂಕಿನ ವ್ಯವಹಾರ ಮಾಡತಕ್ಕದ್ದು.

17. **ಉಪಸಮಿತಿಗಳು**: ಕಲೇಸಂನ ಧ್ಯೇಯೋದ್ದೇಶಗಳಿಗೆ ಅನುಗುಣವಾಗಿ ಅಧ್ಯಕ್ಷರು ವಿವಿಧ ಉಪಸಮಿತಿಗಳನ್ನು ರಚಿಸಿಕೊಳ್ಳಬಹುದು.

18. **ನಿಬಂಧನೆ ತಿದ್ದುಪಡಿ**:

ಅ) ನಿಬಂಧನೆಯಲ್ಲಿ ಯಾವ ಬದಲಾವಣೆಯಾಗಬೇಕಾದರೂ ವಿಶೇಷ ಸರ್ವ ಸದಸ್ಯರ ಸಭೆಯನ್ನು ಕರೆದು ಅದರಲ್ಲಿ ಸೂಕ್ತ ಬದಲಾವಣೆಗಳನ್ನು ಮಾಡತಕ್ಕದ್ದು.

ಆ) ಈ ಸಂಘದ ನಿಬಂಧನೆಗೆ ತಿದ್ದುಪಡಿ ತರಬಯಸುವ ಸದಸ್ಯರು ಆಯಾ ವರ್ಷದ ಏಪ್ರಿಲ್ 15ರ ಒಳಗೆ ಬರಹದ ಮೂಲಕ ಸಲಹೆಗಳನ್ನು ತಿಳಿಸತಕ್ಕದ್ದು.